International Journal of Kannada Research
of
Kannada Research

International Journal of Kannada Research
www.kannadajournal.com

**ISSN: 2454–5813**
IJSR 2016; 2(4): 13-16
© 2016 IJKS
www.kannadajournal.com
Received: 03-08-2016
Accepted: 04-09-2016

**Vanaja P**
Research Student, Hampi University, Associate Professor, Government First Grade College, H.S.R. Layout, Bangalore, India

**Dr. HA Sathyavathi**
Associate Professor and Head of the department, Department of Kannada, SJRC College of Science and Commerce, Anandarao Circle, Bangalore.

**Correspondence**
Vanaja P
Research Student, Hampi University, Associate Professor, Government First Grade College, H.S.R. Layout, Bangalore, India

# ವೀಣಾ ಶಾಂತೇಶ್ವರ ಅವರ ಕಾದಂಬರಿಗಳಲ್ಲಿ ಆತ್ಮಸಖ್ಯದ ಶೋಧನೆ

**Vanaja P, Dr. HA Sathyavathi**

ವೀಣಾ ಶಾಂತೇಶ್ವರ ಅವರು ಕನ್ನಡದ ಮಾತ್ರವಲ್ಲ ಭಾರತದ ಪ್ರಾತಿನಿಧಿಕ ಲೇಖಕಿಯರಲ್ಲಿ ಒಬ್ಬರು. ವೀಣಾ ಶಾಂತೇಶ್ವರ ಮೂಲತಃ ಬಾಗಲಕೋಟೆಯವರಾದರೂ ಕಾಲೇಜಿನ ವಿದ್ಯಾಭ್ಯಾಸ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಲೇಖಕಿಯಾಗಿ ತಮ್ಮ ಅನುಭವವನ್ನು ವಿಸ್ತಾರ ಮಾಡಿಕೊಂಡದ್ದು ಧಾರವಾಡದಲ್ಲಿ. ಐದು ಕಥಾ ಸಂಕಲನಗಳು, ಎರಡು ಕಾದಂಬರಿಗಳು ಅಲ್ಲದೆ ವಿಮರ್ಶಾ ಕೃತಿಗಳನ್ನು ಇವರು ರಚಿಸಿದ್ದಾರೆ. ಇದಲ್ಲದೆ ಆರು ಕೃತಿಗಳನ್ನು ಸಂಪಾದಿಸಿದ್ದಾರೆ. ನವ್ಯ ಸಾಹಿತ್ಯದ ಉತ್ಕರ್ಷದ ಅವಧಿಯಲ್ಲಿ ಬರೆಯಲು ತೊಡಗಿದ ಇವರ ಸಾಹಿತ್ಯದ ಬಗ್ಗೆ ವಿಮರ್ಶಾ ವಲಯದಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಇವರ ಸಾಹಿತ್ಯದ ಮುಖ್ಯ ಗುಣ ನಿರ್ಭಿಡೆ ಮತ್ತು ನಿರ್ಭೀತಿಗಳಾಗಿರುವುದರಿಂದ ಇವರ ಸಾಹಿತ್ಯ ಬೋಲ್ಡ್ ಎಂಬಂತೆಯೂ ಕರೆಸಿಕೊಂಡಿದೆ. ಇದೇನೇ ಇದ್ದರೂ ಕನ್ನಡ ಕಥನ ಸಾಹಿತ್ಯಕ್ಕೆ ವಸ್ತು, ಭಾಷೆ, ಕಥನ ತಂತ್ರ ಎಲ್ಲದರಲ್ಲೂ ಒಂದು ಹೊಸ ಮಾರ್ಗವನ್ನು ಹಾಕಿಕೊಟ್ಟವರು ಇವರು. ಇವರ ಎರಡು ಕಾದಂಬರಿಗಳು ಗಂಡಸರು ಹಾಗೂ ಶೋಷಣೆ, ಬಂಡಾಯ ಇತ್ಯಾದಿ.

**ಈ ಎರಡು ಕಾದಂಬರಿಗಳ ಹೆಣ್ಣು ಪುರುಷನೊಂದಿಗೆ ಆತ್ಮಸಖ್ಯವನ್ನು ಪಡೆಯಲು ನಡೆಸುವ ಶೋಧನೆಯನ್ನು ಸ್ತ್ರೀವಾದೀ ತಾತ್ವಿಕತೆಯ ನೆಲೆಯಲ್ಲಿ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.** ಸ್ತ್ರೀವಾದವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಲಾಗಿದೆ. ಸ್ತ್ರೀವಾದ ಎಂಬುದು ಕೇವಲ ಒಂದು ವೈಚಾರಿಕತೆಯಲ್ಲ. ಇದು ಜೀವನದ ಒಂದು ಕ್ರಮ. ಇಲ್ಲಿ ಪುರುಷ ಯಾಜಮಾನ್ಯಕ್ಕೆ ಬದಲಾಗಿ ಸಮಾನತೆಯ ನಿರೀಕ್ಷೆಯಿದೆ. ಈ ಸಮಾನತೆಯ ಬದುಕನ್ನು ಸ್ತ್ರೀ ಮತ್ತು ಪುರುಷರೇ ಖುದ್ದಾಗಿ ಕಟ್ಟಿಕೊಳ್ಳಬೇಕಾಗಿದೆ. ಮುಖ್ಯವಾಗಿ ಸ್ತ್ರೀವಾದ ಎಂಬುದು ಕೇವಲ ಸ್ತ್ರೀಪರವೂ ಅಲ್ಲ, ಪುರುಷ ವಿರೋಧಿಯೂ ಅಲ್ಲ. ಇದೊಂದು ಸ್ತ್ರೀ ಮತ್ತು ಪುರುಷರನ್ನು ಸಮಾನ ಪಾತಳಿಯಲ್ಲಿಟ್ಟು ನೋಡುವ ಕ್ರಮ. ಸ್ತ್ರೀವಾದದ ಧೀರ್ಘ ಪ್ರಯಾಣವನ್ನು 1ಬಹಿಷ್ಕಾರದಿಂದ ಸ್ವೀಕಾರದ ಕಡೆಗಿನ, ಅನಧಿಕೃತತೆಯಿಂದ ಅಧಿಕೃತತೆಯ ಕಡೆಗಿನ, ಸ್ವಗತದಿಂದ ಸಂವಾದದ ಕಡೆಗಿನ ಪ್ರಯಾಣವೆಂದೂ ಗುರುತಿಸಬಹುದು.1ಮಹಿಳೆಯ ಚರಿತ್ರೆಯನ್ನು ಕಟ್ಟುತ್ತಿರುವ ಈ ಹೊತ್ತಿನಲ್ಲಿ ಮಹಿಳಾ ಸಾಹಿತ್ಯದ ಸ್ತ್ರೀವಾದೀ ನೆಲೆಯ ವಿಮರ್ಶೆ ಬಹಳ ಮುಖ್ಯವಾದುದು. ಮಹಿಳೆಯರ ಸಾಹಿತ್ಯದ ಅಧ್ಯಯನ ಎಂಬುದು ಮಹಿಳೆಯ ಚರಿತ್ರೆಯ ಅಧ್ಯಯನವೂ ಹೌದು. ಇಂಥಹ ವಿಮರ್ಶೆಯು ಮಹಿಳೆಯರ ಬರಹಕ್ಕೆ ಅಸ್ತಿತ್ವವನ್ನು ಮತ್ತು ಅನನ್ಯತೆಯನ್ನು ನೀಡುವ ಪ್ರಯತ್ನ ಮಾಡುತ್ತಿದೆ. ಈ ಮೂಲಕ ಲೇಖಕಿಯರಿಗೆ ಸಾಹಿತ್ಯ ಪರಂಪರೆಯಲ್ಲಿ ಯೋಗ್ಯ ಸ್ಥಾನ ನಿರ್ದೇಶನ ಮಾಡಲು ಪ್ರಯತ್ನಿಸುತ್ತಿದೆ. ಈ ನೆಲೆಯಲ್ಲಿ ವೀಣಾ ಶಾಂತೇಶ್ವರ ಅವರ ಸಾಹಿತ್ಯದ ಸ್ತ್ರೀವಾದೀ ವಿಮರ್ಶೆಯು ಅತ್ಯಂತ ಅಗತ್ಯವಾಗಿದೆ.

ವೀಣಾ ಅವರು ಬರೆಯಲು ತೊಡಗುವ ಮುಂಚಿನ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಹೆಣ್ಣು ಸ್ವಮರುಕದ ನೆಲೆಯಲ್ಲಿ ಚಿತ್ರಣಗೊಂಡಿದ್ದಾಳೆ. ಆದರೆ ವೀಣಾ ಅವರ ಕಾಲಘಟ್ಟ ಅಪೂರ್ವ ಅರಿವಿನ ಧಾರೆ ಹರಿದು ಬಂದ ಕಾಲಘಟ್ಟ. ಹೆಣ್ಣು ಉನ್ನತ ವಿದ್ಯಾಭ್ಯಾಸವನ್ನು ಪಡೆಯಲು ಸಾಧ್ಯವಾದದು ಈ ಕಾಲಘಟ್ಟದಲ್ಲಿ. ಹೀಗಾಗಿಯೇ ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ಮಾಡುತ್ತಿದ್ದ ವೀಣಾ ಅವರಿಗೆ ಸಹಜವಾಗಿಯೇ ಸ್ತ್ರೀವಾದಿ ತಾತ್ವಿಕತೆಯ ಪರಿಚಯವಾಯಿತು. ಜೊತೆಗೆ ನವ್ಯ ಸಾಹಿತ್ಯದ ಉತ್ಕರ್ಷದ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದ ಇವರ ಸಾಹಿತ್ಯವು ನವ್ಯ ಸಾಹಿತ್ಯದ ಪ್ರಭಾವಕ್ಕೂ ಒಳಗಾಯಿತು. ನವ್ಯ ಸಾಹಿತ್ಯದ ಮಹಾತ್ವಾಕಾಂಕ್ಷೆ ವ್ಯಕ್ತಿ ಶೋಧ. ನವ್ಯದ ಪ್ರಭಾವಕ್ಕೆ ಒಳಗಾದ ಇವರ ಸಾಹಿತ್ಯದ ಕೇಂದ್ರ ಕಾಳಜಿ ಸ್ತ್ರೀ ಶೋಧ. ಸ್ತ್ರೀ ಶೋಧದಿಂದ ಪ್ರಾರಂಭವಾಗುವ ಇವರ ಕಥನ ಮುಂದೆ ನವ್ಯದಿಂದ ಬಿಡುಗಡೆ ಪಡೆದು ಸಮುದಾಯದ ಸ್ಥಾಪಿತ ಮೌಲ್ಯಗಳ ಶೋಧನೆಗೆ ತೊಡಗುತ್ತದೆ. ಈ ಶೋಧನೆ ಸ್ತ್ರೀ

ಪುರುಷರ ಸಂಬಂಧದ ಶೋಧನೆಯ ಮೂಲಕ ನಡೆದಿದೆ. ಸ್ಥಾಪಿತ ಮೌಲ್ಯಗಳ ನಿರಾಕರಣೆಯ ಜೊತೆಗೆ ಹೊಸ ಮೌಲ್ಯಗಳ ಸಾಧ್ಯತೆಗಳ ಶೋಧನೆಯೂ ಇವರ ಕಥನದ ಮುಖ್ಯ ಕಾಳಜಿಯಾಗಿದೆ.

ಇವರ ಎರಡು ಕಾದಂಬರಿಗಳಲ್ಲೂ ಸ್ತ್ರೀ ಪುರುಷ ಸಂಬಂಧದಲ್ಲಿರಬೇಕಾದ ಆತ್ಮಸಖ್ಯದ ಶೋಧವಿದೆ. ಆತ್ಮಸಖ್ಯ ಎಂಬುದನ್ನು ಹೀಗೆ ವಿವರಿಸಿಕೊಳ್ಳಬಹುದು. ಇದೊಂದು ಹೊಸ ಬದುಕಿನ ರೀತಿ. ಇಲ್ಲಿ ಗಂಡು ಮತ್ತು ಹೆಣ್ಣನ್ನು ಸಮಾನ ಪಾತಳಿಯಲ್ಲಿಟ್ಟು ನೋಡಬೇಕೆಂಬ ನಿರೀಕ್ಷೆ ಇಲ್ಲಿದೆ. ಸ್ಥಾಪಿತ ಮೌಲ್ಯ ವ್ಯವಸ್ಥೆಯಲ್ಲಿ ಹೆಣ್ಣು ಪುರುಷನಿಗೆ ಅಧೀನ ಮತ್ತು ಇಲ್ಲಿ ಪುರುಷನದೇ ಯಾಜಮಾನ್ಯ. ವೀಣಾ ಅವರ ಕಾಲಘಟ್ಟ ಆಧುನಿಕ ಚಿಂತನೆಗಳ ಮಹಾಪೂರವೊಂದು ಹರಿದು ಬಂದ ಕಾಲಘಟ್ಟ. ಸ್ತ್ರೀವಾದಿ ತಾತ್ವಿಕತೆ ಎಂಬ ವಿಚಾರಧಾರೆಯು ಇದೇ ಕಾಲಘಟ್ಟದಲ್ಲಿ ಹರಿದು ಬಂತು. ಹೀಗಾಗಿ ಇವರ ಕಾದಂಬರಿಗಳಲ್ಲಿ ಚಿತ್ರಿತವಾಗುವ ಹೆಣ್ಣು ಆಧುನಿಕ ಮನೋಭಾವದ ವಿದ್ಯಾವಂತ ಹೆಣ್ಣು. ಆದ್ದರಿಂದಲೇ ಇವಳು ಪುರುಷನೊಂದಿಗಿನ ತನ್ನ ಸಖ್ಯ ಪರಂಪರಾಗತವಾಗಿ ಇರದೆ ಹೊಸ ರೀತಿಯಲ್ಲಿ ಇರಬೇಕೆಂದು ಬಯಸುತ್ತಾಳೆ. ಈ ಹೊಸತನದ ಹುಡುಕಾಟ ಇವಳಿಗೂ ಹೊಸದು ಜೊತೆಗೆ ಪುರುಷನಿಗೂ ಹೊಸದು. ಇಲ್ಲಿಯ ಹೆಣ್ಣು ಬಯಸುವುದು ಪುರುಷನೊಂದಿಗೆ ದೇಹಸಖ್ಯದಾಚೆಗಿನ ಆತ್ಮ ಸಖ್ಯ. ಆದ್ದರಿಂದಲೇ ಇವಳು ಪುರುಷ ತನ್ನನ್ನು ದೇಹಮೂಲದಿಂದಲೇ ಗ್ರಹಿಸುವ ನೆಲೆಯನ್ನು ವಿರೋಧಿಸುತ್ತಾಳೆ. ತನ್ನನ್ನು ದೇಹಮೂಲ ನೆಲೆಯಿಂದ ಸ್ವೀಕರಿಸದೆ ದೇಹಾತ್ಮಗಳ ಸಾತತ್ಯತೆಯ ನೆಲೆಯಲ್ಲಿ ಗುರುತಿಸಬೇಕೆಂಬುದು ಇವಳ ನಿರೀಕ್ಷೆ. ತನ್ನ ವ್ಯಕ್ತಿತ್ವವನ್ನು ಗೌರವಿಸುವ, ತನ್ನ ಭಾವನೆಗಳಿಗೆ ಸ್ಪಂದಿಸುವ, ತನ್ನ ಆತ್ಮಸಮ್ಮಾನಕ್ಕೆ ಧಕ್ಕೆ ತರದಿರುವ, ತನ್ನನ್ನು ಇರುವ ಸ್ಥಿತಿಯಲ್ಲಿಯೇ ಸ್ವೀಕರಿಸುವ ಪುರುಷನೊಂದಿಗಿನ ಸಖ್ಯದ ಶೋಧನೆಯಲ್ಲಿ ಇವಳು ತೊಡಗುತ್ತಾಳೆ. ಆದರೆ ಸ್ಥಾಪಿತ ಮೌಲ್ಯ ವ್ಯವಸ್ಥೆಯ ಭದ್ರವಾದ ಹಿಡಿತಕ್ಕೆ ಸಿಲುಕಿರುವ ಪುರುಷ ಈ ಹೊಸ ಬದುಕಿಗೆ ಇನ್ನೂ ಸಿದ್ಧನಾಗಿಲ್ಲ. ಸ್ಥಾಪಿತ ಮೌಲ್ಯವ್ಯವಸ್ಥೆಯಲ್ಲಿ ಹೆಣ್ಣು ಪುರುಷನಿಗೆ ಅಧೀನಳು. ಇಲ್ಲಿಯ ಪುರುಷ ದೇಹಪ್ರಾಧಾನ್ಯತೆಯ ನೆಲೆಯಲ್ಲಿಯೇ ಹೆಣ್ಣನ್ನು ಗ್ರಹಿಸುವವನು. ಹೀಗಾಗಿ ಇವಳು ಬಯಸುವ ಆತ್ಮಸಖ್ಯ ಕೇವಲ ಬಿಸಿಲುಕುದುರೆ ಮಾತ್ರ. ಹೀಗಾಗಿ ಪುರುಷನೊಂದಿಗೆ ಸಂಘರ್ಷ ಇವಳಿಗೆ ಅನಿವಾರ್ಯ.

**ಇವರ ಕಾದಂಬರಿ ಗಂಡಸರು ಆಧುನಿಕ ಹೆಣ್ಣೊಬ್ಬಳ ಆತ್ಮಸಖ್ಯದ ಹುಡುಕಾಟದ ಪಯಣವೇ ಆಗಿದೆ. ಗಂಡಸರು ಕಾದಂಬರಿಯಲ್ಲಿ ಈ ಆತ್ಮಸಖ್ಯದ ಶೋಧ ವಿವಾಹೇತರ ಸಂಬಂಧದ ನೆಲೆಯಲ್ಲಿ ನಡೆದು ತಾನು ಬಯಸಿದ ಆತ್ಮಸಖ್ಯ ದೊರೆಯದಿದ್ದಾಗ ಇಲ್ಲಿಯ ಹೆಣ್ಣು ಅಂತಹ ಸಂಬಂಧಗಳಿಂದ ಬಿಡುಗಡೆಯನ್ನು ಪಡೆದು ತನ್ನ ಆಯ್ಕೆಯ ಬದುಕನ್ನು ರೂಪಿಸಿಕೊಳ್ಳುತ್ತಾಳೆ.** ಶಾಂತಿಯ ಬದುಕಿಗೆ ಪ್ರವೇಶಿಸುವ ಮೊದಲ ಪುರುಷ ಶಂಕರ. ಶಂಕರನಲ್ಲಿ ಆತ್ಮಸಖ್ಯವನ್ನು ಶಾಂತಿ ನಿರೀಕ್ಷಿಸಿದ್ದರೆ ಶಂಕರ ಅವಳೊಂದಿಗೆ ದೇಹಸಖ್ಯವನ್ನು ಮಾತ್ರ ಹೊಂದಲು ಪ್ರಯತ್ನಿಸುತ್ತಾನೆ. ಸ್ತ್ರೀ ಸ್ವಾತಂತ್ರ್ಯವೆಲ್ಲಾ ಮಣ್ಣು ಸುಡುಗಾಡು, ಅವನಿಗೆ ಬೇಕಾಗಿದ್ದುದು ಇವನ ಆಸೆಗಳನ್ನು ಪೂರೈಸುವ, ಇವನ ಮಾತುಗಳನ್ನು ಕೇಳುವ ಸ್ವಂತ ವ್ಯಕ್ತಿತ್ವವಿಲ್ಲದ ಹೆಣ್ಣು. ಹೀಗಾಗಿ ಈ ಸಂಬಂಧ ಮುರಿದು ಬೀಳುತ್ತದೆ. ನಂತರ ಇವಳ ಬದುಕಿನಲ್ಲಿ ಪ್ರವೇಶಿಸುವ ವ್ಯಕ್ತಿ ಪ್ರೊ. ಮಠದ್. ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಉದ್ದುದ್ದ ಮಾತನಾಡುವ ಇವನ ಬಗ್ಗೆ ಸಹಜವಾಗಿಯೇ ಶಾಂತಿ ಆಕರ್ಷಿತಳಾಗುತ್ತಾಳೆ. ತನ್ನ ಬಣ್ಣದ ಮಾತುಗಳಿಂದ ಅವಳನ್ನು ಪಡೆಯಲು ಹಪಹಪಿಸುವ ಮಠದನಿಗೆ ಇವಳ ಉತ್ತರ ದೈಹಿಕ ಪ್ರೇಮ ಶ್ರೇಷ್ಟವಲ್ಲ ಎಂಬುದು. ನಿನ್ನದು ಮಡಿ ಪ್ರೀತಿ, ಟೇಕ್ ಆಲ್ ಗಿವ್ ಆಲ್ ಥರದ ಪ್ರೀತಿ ನಿನ್ನದಲ್ಲ ಎಂದು ಅವಳನ್ನು ಮಠದ್ ಕೆಣಕಿದಾಗ ಅವಳು ಅವನು ಬಯಸಿದ ಪ್ರೀತಿಯನ್ನು ಕೊಡಲು ಸಿದ್ಧಳಾಗುತ್ತಾಳೆ. ಆದರೆ ಮಠದ್ ಈಗಾಗಲೇ ವಿವಾಹಿತ ಎಂಬ ವಿಚಾರ ಮತ್ತು ಅವಳ ಗೆಳತಿ ಜಯಾಳಿಗೂ ಇದೇ ತರದ ಪತ್ರವನ್ನು ಮಠದ್ ಬರೆದ ವಿಚಾರ ತಿಳಿದು ಆಘಾತಕ್ಕೆ ಒಳಗಾಗುತ್ತಾಳೆ. ರಮಾಕಾಂತ ಶಿಂದೆಯೊಂದಿಗೆ ಆತ್ಮಸಖ್ಯವನ್ನು ಬಯಸಿ ಬದುಕಲು ಪ್ರಾರಂಭಿಸುವ ಶಾಂತಿಗೆ ಆತನೊಡನೆ ಮಲಗಿ ಎದ್ದಾಗ ಆಗುವ ಸಮಾಧಾನ ಕಾಮತೃಪ್ತಿಯಲ್ಲ. ಮಗುವಾಗಿದ್ದಾಗ ತಂದೆಯ ಮಡಿಲಿನಲ್ಲಿ ಆಡುವಾಗ ಆಗುತ್ತಿದ್ದಂಥ ಸಮಾಧಾನ. ಆದರೆ ಆ ಸಮಾಧಾನ ಬಹಳ ದಿನ ಉಳಿಯುವುದಿಲ್ಲ. ಇವಳ ಮೊದಲಿನ ಪ್ರೀತಿಯ ವಿಷಯವನ್ನು ತಿಳಿದ ಶಿಂದೆ ಇವಳನ್ನು ಬಿಟ್ಟು ಹೊರಡುತ್ತಾನೆ. ವ್ಯಂಗ್ಯವೆಂದರೆ ಸ್ವತಃ ಶಿಂದೆ ವಿವಾಹಿತ ಹಾಗೂ ವಿವಾಹಪೂರ್ವದಲ್ಲಿಯೇ ಇನ್ನೊಂದು ಹೆಣ್ಣನ್ನು ಪ್ರೀತಿಸಿದ್ದವನು ಮತ್ತು ಅವಳೊಂದಿಗೆ ದೈಹಿಕ ಸಂಪರ್ಕವನ್ನೂ ಉಳ್ಳಂತವನಾಗಿದ್ದನು. ಈ ವಿಷಯ ತಿಳಿದಾಗ ಶಾಂತಿ ಅವನನ್ನು ಕ್ಷಮಿಸಿರುತ್ತಾಳೆ ಹಾಗೂ ಅವನನ್ನು ಸ್ವೀಕರಿಸಲು ಸಿದ್ಧಳಾಗುತ್ತಾಳೆ. ಆದರೆ ಶಾಂತಿಯ ಭೂತವನ್ನು ಜೀರ್ಣಿಸಿಕೊಳ್ಳುವ ಉದಾರತೆ ಶಿಂದೆಯಲ್ಲಿಲ್ಲ ಎಂದು ಹೇಳುವ ಮೂಲಕ ಸಮಾಜದಲ್ಲಿ ಹೆಣ್ಣಿಗೊಂದು ನ್ಯಾಯ ವ್ಯವಸ್ಥೆ ಗಂಡಿಗೊಂದು ನ್ಯಾಯ ವ್ಯವಸ್ಥೆ ಇರುವುದನ್ನು ಇಲ್ಲಿ ಲೇಖಕಿ ಪ್ರಶ್ನಿಸುತ್ತಾರೆ. ಹೆಣ್ಣು ತನಗೊಬ್ಬನಿಗೇ ಮೀಸಲಾಗಿರಬೇಕು ಎಂಬ ನಿರೀಕ್ಷೆ ಗಂಡಿನದು ಎಂಬ ಧ್ವನಿ ಇಲ್ಲಿದೆ. ಮುಂದೆ ಪರಿಚಯವಾಗುವ ಜಾನ್ ಕೂಡ ಇದಕ್ಕಿಂತ ಭಿನ್ನನಲ್ಲ. ಹೆಣ್ಣಿಗೆ ಒಮ್ಮೆ ಕಳಂಕ ಅಂಟಿದರೆ ಏನು ಮಾಡಿದರೂ ತೊಡೆದು ಹಾಕಲು ಸಾಧ್ಯವಾಗುವುದಿಲ್ಲ. ಶಾಂತಿಯನ್ನು ಅನುಮಾನದ ಕಣ್ಣಿನಿಂದಲೇ ನೋಡುವ ಜಾನ್‌ನ ಎಲ್ಲ ನಡವಳಿಕೆಗಳನ್ನು ಸಹಿಸುತ್ತಾ ಅಲ್ಲೇ ತನ್ನ ನೆಲೆಯನ್ನು ಕಂಡುಕೊಳ್ಳಲು ಬಯಸಿದ ಶಾಂತಿ ಅಲ್ಲಿಂದಲೂ ಹೊರಡುತ್ತಾಳೆ. ಮುಂದೆ ಕಲ್ಕತ್ತೆಗೆ ಅವಳು ಪ್ರಯಾಣಿಸುವಾಗ ವಿಮಾನದಲ್ಲಿ ಭೇಟಿಯಾಗುವ ವ್ಯಕ್ತಿ ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನನ್ನು ಪ್ರೀತಿಸುತ್ತೀಯಾ? ಎಂದಾಗ ಪ್ರೀತಿಯೆಂದರೇನು ಎಂಬುದು ತನಗೆ ಗೊತ್ತಿಲ್ಲ ಎಂಬ ಅವಳ ಉತ್ತರ ಮಾರ್ಮಿಕವಾಗಿದೆ. ನಿಜವಾದ ಪ್ರೀತಿಯನ್ನು ಹುಡುಕುತ್ತಾ ಹೊರಟ ಶಾಂತಿ ಪ್ರೀತಿಯ ಬಗೆಗಿನ ನಂಬಿಕೆಯನ್ನೇ ಕಳೆದುಕೊಳ್ಳುವ ದುರಂತ ಈ ಕತೆಯಲ್ಲಿದೆ. ಕೊನೆಗೂ ಇವಳು ಬಯಸುವ ಆತ್ಮಸಖ್ಯ ಇವಳಿಗೆ ದೊರೆಯುವುದಿಲ್ಲ. ಈ ಕಾದಂಬರಿಯಲ್ಲಿ ಆತ್ಮಸಖ್ಯ ದೊರೆಯದಿದ್ದಾಗ ಅವಳಿಗೆ ಇರುವ ಆಯ್ಕೆ ಆ ಸಂಬಂಧದಿಂದ ಬಿಡುಗಡೆ. ಹೀಗೆ ಹಲವು ಪುರುಷರ ಮನೋ ವ್ಯಾಪಾರವನ್ನೂ ಸ್ವಾರ್ಥವನ್ನೂ ಶೋಧಿಸುತ್ತಾ ಹೊರಡುವ ಇಲ್ಲಿಯ ಹೆಣ್ಣು ಪುರುಷನೊಂದಿಗಿನ ಸಂಬಂಧದಲ್ಲಿ ತನ್ನನ್ನು ತಾನು ಶೋಧಿಸಿಕೊಳ್ಳುತ್ತಾಳೆ. ವಿವಾಹ ಎಂಬ ಸಂಸ್ಥೆಯಲ್ಲಿ ಹೆಣ್ಣಿನ ಶೋಷಣೆ ಇರುವಂತೆ ವಿವಾಹೇತರ ಸಂಬಂಧದಲ್ಲೂ ಶೋಷಣೆಯಿದೆ ಎಂಬ ಸತ್ಯದ ಅರಿವು ಇಲ್ಲಿದೆ. ಹೆಣ್ಣಿನ ಬದುಕಿನ ಸ್ಥಿತ್ಯಂತರದ ಕಾಲಘಟ್ಟದಲ್ಲಿ ಹೆಣ್ಣು ಹಲವು ಸವಾಲುಗಳನ್ನು ಎದುರಿಸಬೇಕಾದುದು ಅನಿವಾರ್ಯ. ಮದುವೆ ಮತ್ತು ದಾಂಪತ್ಯಗಳೇ ಅಂತಿಮ ಸತ್ಯ ಎಂಬ ನೆಲೆಯ ವಿರುದ್ಧ ದಿಕ್ಕಿನಲ್ಲಿ ಈ ಕಾದಂಬರಿ ಸಾಗಿದೆ. ಮದುವೆ ಮತ್ತು ದಾಂಪತ್ಯಗಳು ಅಂತಿಮವೂ ಅಲ್ಲ, ಅನಿವಾರ್ಯವೂ ಅಲ್ಲ ಎಂಬ ಮನೋಭಾವ ಹೊಂದಿದ ಮೇಲಿನ ಕತೆಗಳಲ್ಲಿ ಬಂಧನವಿಲ್ಲದ ಮುಕ್ತ ಸಂಬಂಧಗಳು ಕೂಡ ಮುರಿದು ಬೀಳುತ್ತವೆ.

**ದಾಂಪತ್ಯ ಮತ್ತು ಕುಟುಂಬ ಹೆಣ್ಣಿನ ಜೀವಕೇಂದ್ರಗಳು... ಈ ಜೀವಕೇಂದ್ರಗಳನ್ನೇ ತನ್ನ ಬದುಕಿನ ಕೇಂದ್ರಗಳಾಗಿಸಿಕೊಳ್ಳುವ ಮತ್ತು ಅದರಲ್ಲಿ ತನ್ನ ಅಧಿಕೃತತೆಯನ್ನು ಹುಡುಕುವ ನೆಲೆಯೊಂದು ಇವರ**

**ಎರಡನೇ ಘಟ್ಟದ ಕಥನದಲ್ಲಿ ಕಾಣಿಸಿಕೊಳ್ಳುತ್ತದೆ. ದಾಂಪತ್ಯ ಮತ್ತು ಕುಟುಂಬಕ್ಕೆ ಶಕ್ತವಾದ ಪರ್ಯಾಯಗಳಿಲ್ಲ ಎನ್ನುವ ಸತ್ಯವನ್ನು ಮನವರಿಕೆ ಮಾಡಿಕೊಂಡ ಘಟ್ಟವಿದು. ಈ ಘಟ್ಟದ ಪ್ರಾತಿನಿಧಿಕ ಕಾದಂಬರಿ ಶೋಷಣೆ, ಬಂಡಾಯ ಇತ್ಯಾದಿ.** ಈ ಕಾದಂಬರಿಯಲ್ಲಿ ದಾಂಪತ್ಯದೊಳಗೇ ಆತ್ಮಸಖ್ಯದ ಹುಡುಕಾಡವಿದೆ. ವೈದ್ಯೆಯಾದ ಶಾಂತಾ ಅಪ್ಪೆ ಎಂಬ ಕೇಂದ್ರ ಪಾತ್ರದ ಮೂಲಕ ಸಿನೆಮಾ ಕ್ಷೇತ್ರದಲ್ಲಿ ಹೆಸರು ಮಾಡಬೇಕೆಂದು ಬಯಸುವ ಕಮಲಾ, ಮನೆಕೆಲಸ ಮಾಡುವ ರೋಷನ್‌ಬೀ, ಬ್ಯಾಂಕಿನಲ್ಲಿ ಕೆಲಸ ಮಾಡುವ ಲೀಲಾ ಕುಲಕರ್ಣಿ, ಟೆಕ್ಸ್‌ಟೈಲ್ ಮಿಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಭಾಸ್ಕರ್ ಸಿಂಗರ ಹೆಂಡತಿ ಪೂರ್ಣಿಮಾ ಇವರೆಲ್ಲರ ಕತೆಗಳು ಬಿಚ್ಚಿಕೊಳ್ಳುತ್ತವೆ. ಸಿನೆಮಾ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಬೇಕೆಂಬ ಮಹಾತ್ವಾಕಾಂಕ್ಷೆಯನ್ನುಳ್ಳ ಕಮಲಾ ಆತ್ಮಸಖ್ಯವನ್ನು ಬಯಸತ್ತಾ ಆ ಸಖ್ಯವನ್ನು ನೀಡಬಲ್ಲ ಬರವಸೆಯಿಂದ ಈಗಾಗಲೇ ಮದುವೆಯಾಗಿದ್ದು ಮಕ್ಕಳ ತಂದೆಯಾಗಿದ್ದ ನಾಟಕ ನಿರ್ದೇಶಕ ಶಿವಮೂರ್ತಿಯನ್ನು ಮದುವೆಯಾಗುತ್ತಾಳೆ. ಆದರೆ ಅವಳ ನಿರೀಕ್ಷೆಯ ಆತ್ಮಸಖ್ಯದ ಬದಲಿಗೆ ಅವಳಿಗೆ ದೊರೆಯುವುದು ಅವಳ ವ್ಯಕ್ತಿತ್ವವನ್ನು ಗೌರವಿಸದೆ ದೇಹಸಖ್ಯವನ್ನು ಮಾತ್ರ ಬಯಸಿ ಬರುವ ಶಿವಮೂರ್ತಿ. ಇವನು ಮುಂದೊಂದು ದಿನ ಮಗಳ ಸ್ಥಾನದಲ್ಲಿದ್ದ ನೀಲಾಳನ್ನು ಸಹಾ ಪಡೆಯಲು ಬಯಸುತ್ತಾನೆ. ಇದುವರೆಗಿನ ಅವಮಾನಗಳನ್ನು ಅಡವು ಕಚ್ಚಿ ಸಹಿಸಿದ ಕಮಲಾ ಈ ಘಟನೆಯ ನಂತರ ಶಿವಮೂರ್ತಿಯನ್ನು ನಿರಾಕರಿಸಿ ತನ್ನ ವ್ಯಕ್ತಿತ್ವದ ಘನತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಹೊಸ ಬದುಕನ್ನು ಪ್ರಾರಂಭಿಸುವ ದಿಟ್ಟ ನಿರ್ಧಾರವನ್ನು ಕೈಗೊಳ್ಳುತ್ತಾಳೆ.

ರೋಷನ್‌ಬೀ ಕತೆಯು ಇದಕ್ಕಿಂತ ಭಿನ್ನವೇನೂ ಅಲ್ಲ. ಬೇಜವಾಬ್ದಾರಿ ಗಂಡನನ್ನು ಬಿಟ್ಟು ಬದುಕಲಾರದೆ ಅವನೊಂದಿಗೆ ಬದುಕುವುದೂ ಸಾಧ್ಯವಾಗದೆ ತೊಳಲಾಡುವ ಹೆಣ್ಣು. ರೋಷನ್‌ಬೀ ಪ್ರತಿಬಾರಿ ಹಡೆದದ್ದು ಹೆಣ್ಣು ಎಂದು ಇವಳನ್ನು ತಿರಸ್ಕರಿದ ಇವಳ ಗಂಡ ಇನ್ನೊಂದು ಹೆಣ್ಣನ್ನು ಮದುವೆಯಾಗಿ ಇವಳ ಆತ್ಮಸಮ್ಮಾನಕ್ಕೆ ಧಕ್ಕೆಯನ್ನು ತರುವುದಲ್ಲದೆ ಇವಳು ಮತ್ತು ಇವಳ ಮಕ್ಕಳನ್ನು ಪೋಷಿಸುವ ಜವಾಬ್ದಾರಿಯನ್ನು ಮರೆತು ರೋಷನ್‌ಬೀ ಸಂಪಾದಿಸಿದ ಹಣವನ್ನೂ ಕಸಿದುಕೊಳ್ಳಲು ಪ್ರಾರಂಭ ಮಾಡಿದಾಗ ರೋಷನ್‌ಬೀ ತನ್ನ ಗಂಡನಿಂದ ದೂರವಾಗುವ ತೀರ್ಮಾನವನ್ನು ಕೈಗೊಳ್ಳುತ್ತಾಳೆ.

ಕಾದಂಬರಿಯ ಮುಂದಿನ ಭಾಗದಲ್ಲಿ ಆತ್ಮ ಘನತೆಯನ್ನು ಬಯಸಿ ಕವಲು ಮಾರ್ಗವನ್ನು ಹಿಡಿದಿದ್ದ ಕಮಲಾ ಮತ್ತೆ ಶಿವಮೂರ್ತಿಯ ಬಳಿಗೆ ಹಿಂತಿರುಗುತ್ತಾಳೆ. ಈ ಹಿಂತಿರುಗುವಿಕೆಗೆ ಕಾದಂಬರಿಯಲ್ಲಿ ಸ್ಪಷ್ಟವಾದ ಯಾವ ಕಾರಣವೂ ಗೋಚರಿಸುವುದಿಲ್ಲ. ಶಿವಮೂರ್ತಿಯ ಬಗೆಗಿನ ದೌರ್ಬಲ್ಯ ಹಾಗೂ ಒಂಟಿ ಬದುಕಿನ ಬಗೆಗಿನ ಬೇಸರ ಬಹುಶಃ ಅವಳನ್ನು ಹಿಂದಕ್ಕೆ ಕರೆದು ತರುತ್ತದೆ. ರೋಷನ್‌ಬೀ ಸಹಾ ತನ್ನ ಗಂಡ ತನ್ನ ಹೆಸರಿಗೇ ಒಂದು ಪ್ರತ್ಯೇಕ ಪತ್ರ ಬರೆದ ಸಂತೋಷದಲ್ಲಿ ತನ್ನಿಂದ ತನ್ನ ಗಂಡ ಇನ್ನು ಮುಂದೆ ಹಣವನ್ನು ಕಿತ್ತುಕೊಳ್ಳುವುದಿಲ್ಲ ಎಂಬ ಭರವಸೆಯನ್ನು ಪಡೆದು ಅವಳು ಮತ್ತೆ ಹಿಂದಿನ ಬದುಕಿಗೆ ಹಿಂತಿರುಗುತ್ತಾಳೆ.

ಭಾಸ್ಕರ್ ಸಿಂಗರ ಹೆಂಡತಿ ಪೂರ್ಣಿಮಾ ಉತ್ತಮ ಕವಯತ್ರಿಯಾಗಬಹುದಾದವಳು ಇಂದು ಪ್ರತಿವರ್ಷ ತಪ್ಪದೆ ಮಗುವನ್ನು ಹೆರುವ ಯಂತ್ರವಾಗಿದ್ದಾಳೆ. ಮಗುವನ್ನು ಹಡೆಯುವ ಅಥವಾ ಅದನ್ನು ನಿರಾಕರಿಸುವ ಯಾವ ಹಕ್ಕೂ ಇಲ್ಲದೆ ಗಂಡನ ಸಾಮಾಜಿಕ ಸ್ಥಾನಮಾನಗಳನ್ನು ಎತ್ತಿ ಹಿಡಿಯಲು ಸದಾ ಕಾಲ ಶ್ರಮಿಸುವ ಇವಳು ಎಂದೂ ದಾಂಪತ್ಯದಿಂದ ದೂರ ಸರಿಯುವ ಮಾತನ್ನೇ ಆಡುವುದಿಲ್ಲ. ಇವಳೂ ಸಹ ಆತ್ಮಸಖ್ಯದ ಹುಡುಕಾಟವನ್ನು ಕೊನೆಗೊಳಿಸಿ ಹೊಂದಾಣಿಕೆಯ ಬದುಕಿಗೆ ಒಗ್ಗಿಕೊಳ್ಳುತ್ತಾಳೆ.

ಇನ್ನು ವಿವಾಹದ ಬಗ್ಗೆ ನಂಬಿಕೆಯೇ ಇಲ್ಲದ ಹೃದಯದ ಕೋಮಲ ಭಾವನೆಗಳ ಬಗ್ಗೆ ನಂಬಿಕೆಯನ್ನು ಕಳೆದುಕೊಂಡು ವಿವಾಹ ಬಂಧನಕ್ಕೆ ಒಳಗಾಗದೇ ದೈಹಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಾ ವೈದ್ಯ ವೃತ್ತಿ ಮಾಡುತ್ತಿದ್ದ ಶಶಿ ತನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದ ಸತೀಶ ದೇಶಪಾಂಡೆಯನ್ನು ಮೊದಲಿನಿಂದಲೂ ನಿರಾಕರಿಸುತ್ತಲೇ ಬರುತ್ತಾಳೆ. ಕಮಲಾ, ರೋಷನ್‌ಬೀ, ಪೂರ್ಣಿಮಾ ಮುಂತಾದವರ ಬದುಕನ್ನು ಹತ್ತಿರದಿಂದ ಕಂಡು ವಿವಾಹ ಎಂಬುದು ಆತ್ಮ ಸಮ್ಮಾನದ ಬಲಿದಾನ ಎಂಬುದರಲ್ಲಿ ನಂಬಿಕೆ ಇಟ್ಟಿದ್ದ ಇವಳು ಕೊನೆಗೆ ಸತೀಶನೊಂದಿಗೆ ವಿವಾಹ ಬಂಧನಕ್ಕೆ ಒಳಗಾಗಲು ಸಮ್ಮತಿಸುತ್ತಾಳೆ.

ಮೇಲೆ ವಿವರಿಸಲಾದ ಎಲ್ಲ ಪಾತ್ರಗಳೂ ವಿವಾಹದಿಂದ ವಿಮುಖಗೊಂಡರೂ ನಂತರ ವಿವಾಹದ ಬಂಧನಕ್ಕೇ ಒಳಗಾಗುವ ಈ ಕಥನದ ಮಾದರಿ ವೀಣಾ ಅವರ ಸಾಹಿತ್ಯ ಪಡೆದುಕೊಂಡ ಪಲ್ಲಟಕ್ಕೆ ಒಂದು ಮಾದರಿ. ಪ್ರಾರಂಭದ ಇವರ ಕಥನಗಳಲ್ಲಿನ ಹೆಣ್ಣು ಪುರುಷ ಅಹಂಕಾರಕ್ಕೆ ತೀವ್ರವಾದ ಪ್ರತಿಭಟನೆಯನ್ನು ಸೂಚಿಸಿ ಅಂತಿಮವಾಗಿ ಬಿಡುಗಡೆಯನ್ನು ಆಯ್ದುಕೊಳ್ಳುತ್ತಾಳೆ. ಆದರೆ ನಂತರದ ಕಥನದಲ್ಲಿ ಬರುವ ಹೆಣ್ಣು ದಾಂಪತ್ಯವನ್ನೇ ಜೀವಕೇಂದ್ರವನ್ನಾಗಿ ಮಾಡಿಕೊಳ್ಳುವುದು ತೀವ್ರ ಕುತೂಹಲವನ್ನು ಮೂಡಿಸುತ್ತದೆ. ಹಾಗಾದರೆ ಈ ಪಲ್ಲಟಕ್ಕೆ ಕಾರಣಗಳು ಏನಿರಬಹುದು? ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಬಿಡುಗಡೆಯಿಂದ ಸ್ವೀಕಾರದೆಡೆಗಿನ ಈ ನಡೆಯು ನಿಜವಾಗಿಯೂ ಆ ಹೆಣ್ಣಿನ ಆಯ್ಕೆಯೇ? ಅಥವಾ ಕೌಟುಂಬಿಕ ಒತ್ತಡಗಳು, ಸಾಮಾಜಿಕ ಒತ್ತಡಗಳು ಇದಕ್ಕೆ ನಿಜವಾದ ಕಾರಣವೆ? ಒತ್ತಡಗಳೇ ಕಾರಣವಾಗಿದ್ದರೆ ಈ ಒತ್ತಡಗಳು ಎಲ್ಲ ಕಾಲದ ಹೆಣ್ಣಿಗೂ ಇದ್ದದ್ದೇ ಅಲ್ಲವೇ? ಹಾಗಾದರೆ ಇವರ ಪ್ರಾರಂಭದ ಕಥನಗಳ ಹೆಣ್ಣು ಬಿಡುಗಡೆಯನ್ನು ಆಯ್ದುಕೊಂಡದ್ದು ಏಕೆ? ಎಂಬ ಪ್ರಶ್ನೆ ಏಳುತ್ತದೆ.

ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಹೀಗೆ ಕಂಡುಕೊಳ್ಳಬಹುದು. ಇವರ ಪ್ರಾರಂಭದ ಕಥನ ನವ್ಯ ಸಾಹಿತ್ಯದ ತಾತ್ವಿಕತೆಯ ದಟ್ಟವಾದ ಪ್ರಭಾವಕ್ಕೆ ಒಳಗಾದ ಸಾಹಿತ್ಯ. ನವ್ಯದ ವೈಚಾರಿಕತೆಯನ್ನು ತಮ್ಮ ಕೃತಿಗಳಲ್ಲಿ ತರುವ ಒಂದು ಪ್ರಯತ್ನವಾಗಿ ಇವರ ಕತೆಗಳು ಬಂದಿವೆ. ನವ್ಯ ಸಾಹಿತ್ಯದಲ್ಲಿ ನಾಯಕನೊಬ್ಬ ಹಲವು ಹೆಣ್ಣುಗಳ ಮೂಲಕ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗುತ್ತಾನೆ. ಆದರೆ ಈ ಹುಡುಕಾಟದಲ್ಲಿ ಸಫಲನಾಗಲು ಸಾಧ್ಯವಾಗದೇ ಹೆಣ್ಣಿನ ಪ್ರೀತಿಯಲ್ಲಿ ಭರವಸೆಯನ್ನು ಕಳೆದುಕೊಂಡು ಬಿಡುಗಡೆಯ ಕಡೆಗೆ ನಡೆಯುತ್ತಾನೆ. ನವ್ಯದ ಈ ತಾತ್ವಿಕತೆಯ ಪ್ರಭಾವದಿಂದಾಗಿಯೇ ವೀಣಾ ಅವರ ಕಥೆಗಳಲ್ಲಿ ಬರುವ ಹೆಣ್ಣು ಸಹಾ ವಿವಾಹೇತರ ಸಂಬಂಧಗಳಲ್ಲಿ ತನ್ನ ಅಸ್ತಿತ್ವದ ಶೋಧಕ್ಕೆ ತೊಡಗುತ್ತಾಳೆ. ಆಧುನಿಕ ಹೆಣ್ಣೊಬ್ಬಳ ನಿರೀಕ್ಷೆಯ ಪುರುಷ ಅಲ್ಲಿ ದೊರೆಯದಿದ್ದಾಗ ಆ ಬಂಧನದಿಂದ ಬಿಡುಗಡೆಯನ್ನು ಪಡೆಯುತ್ತಾಳೆ. ಪ್ರಾರಂಭದ ಘಟ್ಟದ ಹೆಣ್ಣು ನವ್ಯದ ವೈಚಾರಿಕತೆಯ ತೀವ್ರವಾದ ಪ್ರಭಾವಕ್ಕೆ ಒಳಗಾದವಳಾದರೆ ನಂತರದ ಘಟ್ಟದ ಹೆಣ್ಣು ತೀವ್ರವಾದ ಅನುಭವದ ಶೋಧದಲ್ಲಿ ತೊಡಗುವ ಹೆಣ್ಣು. ಆದ್ದರಿಂದಲೇ ಅವಳಿಗೆ ಬಿಡುಗಡೆ ಅಷ್ಟು ಸುಲಭ ಸಾಧ್ಯವಲ್ಲ. ತಾನು ಬಯಸಿದ ಆತ್ಮಸಖ್ಯ ತನ್ನ ಪುರುಷನಿಂದ ಸಿಗದಿದ್ದಾಗ ಇವಳಿಗೆ ಬಿಡುಗಡೆಯೊಂದೇ ದಾರಿಯಲ್ಲ. ಏಕೆಂದರೆ ಬಿಡುಗಡೆಯೆಂಬುದು ಮತ್ತೆ ಹಲವು ಗೋಜಲುಗಳಿಗೆ ಕಾರಣವಾಗಬಹುದು. ರೋಷನ್‌ಬೀಗೆ ಗಂಡನಿಂದ ಬಿಡಿಗಾಸೂ ಪ್ರಯೋಜನವಿಲ್ಲದಿದ್ದರೂ ಸಮಾಜದ ಕೆಟ್ಟ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಗಂಡನ ಹೆಸರು ಬೇಕು. ತನ್ನ ಮಕ್ಕಳಿಗೆ ತಂದೆ ಬೇಕು ಎನ್ನುವ ಸಲುವಾಗಿ ಇವಳು ತನ್ನ ಗಂಡನನ್ನು ಮತ್ತೆ ಸ್ವೀಕರಿಸುವುದು ಅನಿವಾರ್ಯ. ಕಮಲಾಳ ಹಿಂತಿರುಗುವಿಕೆಗೆ

ಈಗಾಗಲೇ ಹೇಳಿದಂತೆ ಶಿವಮೂರ್ತಿಯ ಬಗೆಗಿನ ಕಳೆದುಕೊಳ್ಳಲಾರದ ಸೆಳೆತವೇ ಕಾರಣ. ಪ್ರೀತಿ ಮತ್ತು ದ್ವೇಷ ಎರಡೂ ಇಲ್ಲದ ಒಂಟಿ ಬದುಕಿಗಿಂತಲೂ ಹೊಂದಾಣಿಕೆಯ ಬದುಕಿನ ಆಯ್ಕೆ ಕಮಲಳದು. ಸತತ ಸಂಘರ್ಷಕ್ಕೆ ಬದಲಾಗಿ ಇಲ್ಲಿಯ ಹೆಣ್ಣು ಹೊಂದಾಣಿಕೆಯನ್ನೇ ಆಯ್ದುಕೊಳ್ಳುತ್ತಾಳೆ. ಈ ಹೊಂದಾಣಿಕೆ ಹೆಣ್ಣಿನ ಸೋಲಲ್ಲ. ಬದಲಿಗೆ ಇದು ಅವಳ ದಟ್ಟವಾದ ಅನುಭವದ ನೆಲೆಯಲ್ಲಿ ಮೂಡಿದ ಪ್ರಬುದ್ಧತೆ. ದಾಂಪತ್ಯದಾಚೆಗಿನ ಸಂಬಂಧದಲ್ಲೂ ಹೆಣ್ಣಿಗೆ ಭದ್ರತೆಯಾಗಲಿ, ಆತ್ಮಸಖ್ಯವಾಗಲೀ ಪುರುಷನಿಂದ ದೊರೆಯುವುದಿಲ್ಲ ಮತ್ತು ಅಲ್ಲೂ ಹೆಣ್ಣು ಶೋಷಣೆಗೆ ಒಳಗಾಗಬೇಕಾದುದು ಅನಿವಾರ್ಯ ಎಂಬ ಅರಿವು ಇವಳಿಗಿದೆ. ಆದ್ದರಿಂದಲೇ ಹೆಣ್ಣಿಗೆ ಮದುವೆ ಮತ್ತು ದಾಂಪತ್ಯಗಳು ಜೀವಕೇಂದ್ರಗಳು ಅವಳು ಅಲ್ಲೇ ತನ್ನ ಅಸ್ತಿತ್ವಕ್ಕೆ ಮತ್ತು ಅಧಿಕೃತತೆಗೆ ಹುಡುಕಾಟ ನಡೆಸಬೇಕಾದುದು ಅನಿವಾರ್ಯ ಎಂಬ ನೆಲೆ ಈ ಕಾದಂಬರಿಯಲ್ಲಿದೆ. ಆತ್ಮಸಖ್ಯದ ಹುಡುಕಾಟಕ್ಕೆ ತೊಡಗಿದ ಇವರ ಕಾದಂಬರಿಗಳ ಹೆಣ್ಣಿನಲ್ಲಿ ಆಗುವ ಈ ಪಲ್ಲಟವನ್ನು ಡಾ. ಎಂ.ಎಸ್. ಆಶಾದೇವಿಯವರು ವೈಚಾರಿಕ ಸ್ತ್ರೀವಾದದಿಂದ ಸಾಂಸ್ಕೃತಿಕ ಸ್ತ್ರೀವಾದದ ಕಡೆಗಿನ ಪಯಣ ಎಂದು ಗುರುತಿಸುತ್ತಾರೆ.

ಎರಡೂ ಕಾದಂಬರಿಗಳಲ್ಲೂ ವಿವಾಹೇತರ ಸಂಬಂಧ ಮತ್ತು ವಿವಾಹ ಎಂಬ ಸಂಸ್ಥೆಯ ಒಳಗೇ ಹೆಣ್ಣು ನಡೆಸುವ ಆತ್ಮಸಖ್ಯದ ಹುಡುಕಾಟ ವ್ಯರ್ಥವೇ ಆಗಿದೆ. ಇದಕ್ಕೆ ಕಾರಣಗಳು ಏನಿರಬಹುದು? ಆತ್ಮಸಖ್ಯ ಎಂಬುದು ಹೊಸ ಬದುಕಿನ ಕ್ರಮವೆನ್ನಬಹುದಾದರೆ ಈ ಹೊಸ ಬದುಕಿನ ಕ್ರಮ ಇಬ್ಬರಿಗೂ ಹೊಸದೇ ಆಗಿದೆ. ಆಧುನಿಕ ವಿಚಾರಧಾರೆಗಳು ಮಹಾಪೂರದಂತೆ ಹರಿದು ಬಂದ ಕಾಲಘಟ್ಟದಲ್ಲಿ ದಾಂಪತ್ಯವೆಂಬುದು ಸ್ತ್ರೀ ಪುರುಷರಿಬ್ಬರಿಗೂ ಹೊಸ ವೇದಿಕೆಯೆ ಆಗಿದೆ. ಅಸಹಾಯಕತೆಯಿಂದ ಅರಿವಿನ ನೆಲೆಗೆ ಹೆಣ್ಣು ಪ್ರಯಾಣವನ್ನು ಬೆಳೆಸಿದ ಈ ಕಾಲಘಟ್ಟದಲ್ಲಿ ಈ ಎರಡರಲ್ಲೂ ಇರುವ ಹಲವು ದಾರಿಗಳ ಹುಡುಕಾಟ ಹೆಣ್ಣಿಗೆ ಅನಿವಾರ್ಯ. ಅಸಹಾಯಕತೆಯಿಂದ ಅರಿವಿನ ನೆಲೆಗೆ ಬರುತ್ತಿರುವ ಹೆಣ್ಣನ್ನು ಒಪ್ಪಿಕೊಳ್ಳುವುದರಲ್ಲಿ ಇರುವ ಸ್ಥಾಪಿತ ಮೌಲ್ಯ ವ್ಯವಸ್ಥೆ ಎಂಬ ಅಡ್ಡಿ ಆತಂಕವನ್ನು ಸ್ತ್ರೀ ಪುರುಷರಿಬ್ಬರೂ ಎದುರಿಸಬೇಕಾಗಿದೆ. ಆದ್ದರಿಂದಲೇ ಹೆಣ್ಣು ಗಂಡು ಇಬ್ಬರ ಇತಿಹಾಸದಲ್ಲೂ ಇದು ಪಲ್ಲಟದ ಕಾಲಘಟ್ಟ. ಆದ್ದರಿಂದ ಈ ಕಾಲಘಟ್ಟದಲ್ಲಿ ಗಂಡು ಮತ್ತು ಹೆಣ್ಣಿಗೆ ಪರಸ್ಪರರಿಂದ ಇರುವ ನಿರೀಕ್ಷೆಗಳು ಪರಂಪರಾಗತ ನಿರೀಕ್ಷೆಗಳಿಗಿಂತ ಭಿನ್ನವಾಗಿದೆ. ಹೀಗಾಗಿ ಆತ್ಮಸಖ್ಯದ ಬದಲು ಸಂಘರ್ಷ ಅನಿವಾರ್ಯ. ವೀಣಾ ಅವರ ಎರಡು ಕಾದಂಬರಿಗಳನ್ನು ಆತ್ಮಸಖ್ಯದ ಹುಡುಕಾಟದ ನೆಲೆಯಲ್ಲಿ ಅಧ್ಯಯನ ಮಾಡಿದಾಗ ಈ ಕೆಲವು ಪ್ರಶ್ನೆಗಳು ಮುನ್ನಲೆಗೆ ಬರುತ್ತವೆ. ಆತ್ಮಸಖ್ಯದ ಕೊರತೆಗೆ ಸ್ತ್ರೀ ಪುರುಷರಿಬ್ಬರೂ ತಾವು ಹೇಗಿದ್ದೇವೋ ಹಾಗೆ ಪರಸ್ಪರ ಒಪ್ಪಿಕೊಳ್ಳಬೇಕೆಂಬ ನಿರೀಕ್ಷೆಯಲ್ಲಿರುವ ತೊಡಕೆ? ಮೌಲ್ಯ ವ್ಯವಸ್ಥೆಯಲ್ಲಿರುವ ತೊಡಕೆ? ಅಥವ ಬದುಕಿನ ರಚನಾ ಕ್ರಮದಲ್ಲಿಯ ತೊಡಕೆ?

**ಟಿಪ್ಪಣಿ**

1. ಲೇಖನ– ಸ್ತ್ರೀವಾದ ಎಂಬ ಲೋಕಮೀಮಾಂಸೆ, ನಾರೀಕೇಳಾ ಅಂಕಣ, ಡಾ. ಎಂ.ಎಸ್. ಆಶಾದೇವಿ, ಪ್ರಜಾವಾಣಿ ಪತ್ರಿಕೆ, ದಿನಾಂಕ 11–10–2015

**ಪರಾಮರ್ಶನ ಗ್ರಂಥಗಳು**


1. ವಿಚಯ ಲೇ: ಡಾ. ಬಿ.ಎನ್. ಸುಮಿತ್ರಾಬಾಯಿ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪ್ರ.ವ.2014
2. ವೀಣಾ ಶಾಂತೇಶ್ವರ ವಾಚಿಕೆ ಸಂ: ಡಾ. ಎಂ.ಎಸ್. ಆಶಾದೇವಿ, ಪ್ರ: ನುಡಿ ಪುಸ್ತಕ, ಪ್ರ.ವ. 2011
3. ಲೇಖ–ಲೋಕ ಸಂ: ಡಾ. ವಿಜಯಾ ದಬ್ಬೆ, ಪ್ರ: ಕರ್ನಾಟಕ ಲೇಖಕಿಯರ ಸಂಘ, ಪ್ರ.ವ. 1998
4. ಕಥಾ ಪಲ್ಲವ, ಸಂ: ಹೆಚ್.ಆರ್. ಇಂದಿರಾ, ಪ್ರ: ಕನ್ನಡ ಲೇಖಕಿಯರ ಸಂಘ, ಬೆಂಗಳೂರು, ಪ್ರ.ವ. 1968, ಪ್ರಸ್ತಾವನೆ ಭಾಗ
5. ಲೇಖಕಿಯರ ಕಥಾ ಸಾಹಿತ್ಯ, ಸಂ: ವೀಣಾ ಶಾಂತೇಶ್ವರ, ಪ್ರ: ಕರ್ನಾಟಕ ಸರ್ಕಾರ, ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಪ್ರ.ವ. 1983
6. ಮಹಿಳೆ, ಸಾಹಿತ್ಯ, ಸಮಾಜ ಲೇ: ಡಾ. ವಿಜಯಾ ದಬ್ಬೆ ಪ್ರ: ರಚನಾ ಪ್ರಕಾಶನ, ಮೈಸೂರು ಮಹಿಳಾ ಅಧ್ಯಯನ ಸಂಪುಟ: 2 ಸಂಚಿಕೆ:1 ಜನವರಿ 2000, ಪ್ರ: ಪ್ರಸಾರಾಂಗ, ಹಂಪಿ ವಿ.ವಿ.
7. ಲೇಖನ: ಮಹಿಳಾ ಸಾಹಿತ್ಯದಲ್ಲಿ ಯಾಜಮಾನ್ಯ ಮತ್ತು ಪ್ರತಿರೋಧಧ ನೆಲೆಗಳು, ಲೇಖಕರು: ಎಂ. ಉಷಾ
8. ಕನ್ನಡ ಕಥನ ಸಾಹಿತ್ಯ: ಕಾದಂಬರಿ ಲೇ: ಜಿ.ಎಸ್. ಆಮೂರ, ಪ್ರ: ಶ್ರೀಹರಿ ಪ್ರಕಾಶನ, ಧಾರವಾಡ
9. ನಡೆದದ್ದೇ ದಾರಿ (ಸಮಗ್ರ ಕಥನ ಸಾಹಿತ್ಯ) ಲೇ: ವೀಣಾ ಶಾಂತೇಶ್ವರ, ಪ್ರ: ಸುಂದರ ಪುಸ್ತಕ ಪ್ರಕಾಶನ, ಧಾರವಾಡ. ಪ್ರ.ವ. 2006, ಮುನ್ನುಡಿ